इस पुस्तिका में **20** मुद्रित पृष्ठ हैं।
This Booklet contains **20** printed pages.

# MVD18–I

परीक्षा पुस्तिका संख्या
Test Booklet No.

| LANG. CODE |
|---|
| **07** |

## प्रश्न-पत्र—I / PAPER—I
## कन्नड़ भाषा परिशिष्ट / KANNADA LANGUAGE SUPPLEMENT
## भाग IV & V / PART IV & V

परीक्षा पुस्तिका संकेत
**Test Booklet Code**

| **I** |
|---|

**इस परीक्षा पुस्तिका को तब तक न खोलें जब तक कहा न जाए।**
**Do not open this Test Booklet until you are asked to do so.**
**इस परीक्षा पुस्तिका के पिछले आवरण (पृष्ठ संख्या 20) पर दिए गए निर्देशों को ध्यान से पढ़ें।**
**Read carefully the Instructions on the Back Cover (Page No. 20) of this Test Booklet.**

**कन्नड़ में निर्देशों के लिए इस पुस्तिका की पृष्ठ संख्या 2 व 19 देखें।**
**For Instructions in Kannada, see Page Nos. 2 and 19 of this Booklet.**

### *परीक्षार्थियों के लिए निर्देश :*

1. यह पुस्तिका मुख्य परीक्षा पुस्तिका का एक परिशिष्ट है, उन परीक्षार्थियों के लिए जो **या** तो भाग—IV (भाषा—I) **या** भाग—V (भाषा—II) **कन्नड़** भाषा में देना चाहते हैं, लेकिन **दोनों नहीं**।
2. परीक्षार्थी भाग I, II, III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से।
3. अंग्रेजी व हिन्दी भाषा पर प्रश्न मुख्य परीक्षा पुस्तिका में भाग—IV व भाग—V के अन्तर्गत दिए गए हैं। भाषा परिशिष्टों को आप अलग से माँग सकते हैं।
4. इस पृष्ठ पर विवरण अंकित करने एवं उत्तर-पत्र पर निशान लगाने के लिए **केवल काले/नीले बॉलपॉइंट पेन** का प्रयोग करें।
5. इस भाषा पुस्तिका का **संकेत I** है। यह सुनिश्चित कर लें कि इस भाषा परिशिष्ट परीक्षा पुस्तिका का संकेत, उत्तर-पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है। अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं तथा प्रत्येक 1 अंक का है :

   भाग—IV : भाषा—I (कन्नड़) (प्रश्न सं० 91–120)
   भाग—V : भाषा—II (कन्नड़) (प्रश्न सं० 121–150)
7. भाग—IV में भाषा—I के लिए 30 प्रश्न और भाग—V में भाषा—II के लिए 30 प्रश्न दिए गए हैं। इस परीक्षा पुस्तिका में केवल कन्नड़ भाषा से सम्बन्धित प्रश्न दिए गए हैं। **यदि भाषा—I और/या भाषा—II में आपके द्वारा चुनी गई भाषा(एँ) कन्नड़ के अलावा है/हैं, तो कृपया उस भाषा वाली परीक्षा पुस्तिका माँग लें। जिन भाषाओं के प्रश्नों के उत्तर आप दे रहे हैं वह आवेदन-पत्र में चुनी गई भाषाओं से अवश्य मेल खानी चाहिए।**
8. **परीक्षार्थी भाग—V (भाषा—II) के लिए, भाषा सूची से ऐसी भाषा चुनें जो उनके द्वारा भाषा—I (भाग—IV) में चुनी गई भाषा से भिन्न हो।**
9. रफ़ कार्य परीक्षा पुस्तिका में इस प्रयोजन के लिए दी गई खाली जगह पर ही करें।
10. सभी उत्तर केवल OMR उत्तर-पत्र पर ही अंकित करें। अपने उत्तर ध्यानपूर्वक अंकित करें। उत्तर बदलने हेतु श्वेत रंजक का प्रयोग निषिद्ध है।

### *Instructions for Candidates :*

1. This Booklet is a Supplement to the Main Test Booklet for those candidates who wish to answer **EITHER** Part—IV (Language—I) **OR** Part—V (Language—II) in **KANNADA** language, but **NOT BOTH**.
2. Candidates are required to answer Parts I, II, III from the Main Test Booklet and Parts IV and V from the languages chosen by them.
3. Questions on English and Hindi languages for Part—IV and Part—V have been given in the Main Test Booklet. Language Supplements can be asked for separately.
4. Use **Black/Blue Ballpoint Pen only** for writing particulars on this page/marking responses in the Answer Sheet.
5. The CODE for this Language Booklet is **I**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **Two** Parts, IV and V, consisting of **60** Objective-type Questions and each carrying 1 mark :

   Part—IV : Language—I (Kannada) (Q. Nos. 91–120)
   Part—V : Language—II (Kannada) (Q. Nos. 121–150)
7. Part—IV contains 30 questions for Language—I and Part—V contains 30 questions for Language—II. In this Test Booklet, only questions pertaining to Kannada Language have been given. **In case, the language(s) you have opted for as Language—I and/or Language—II is a language other than Kannada, please ask for a Test Booklet that contains questions on that language. The languages being answered must tally with the languages opted for in your Application Form.**
8. **Candidates are required to attempt questions in Part—V (Language—II) in a language other than the one chosen as Language—I (Part—IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ____________________
Name of the Candidate (in Capital letters)

अनुक्रमांक (अंकों में) : ____________________
Roll Number (in figures)

(शब्दों में) : ____________________
(in words)

परीक्षा-केन्द्र (बड़े अक्षरों में) : ____________________
Centre of Examination (in Capital letters)

परीक्षार्थी के हस्ताक्षर : ____________________
Candidate's Signature

निरीक्षक के हस्ताक्षर : ____________________
Invigilator's Signature

Facsimile Signature Stamp of Centre Superintendent ____________________

ಈ ಪ್ರಶ್ನೆ ಪುಸ್ತಿಕೆ **20** ಪುಟಗಳನ್ನು ಹೊಂದಿರುತ್ತದೆ.

# MVD18–I

ಪ್ರಶ್ನೆ ಪುಸ್ತಿಕೆ ಸಂಕೇತ

**I**

LANG. CODE
**07**

## ಪ್ರಶ್ನೆ ಪತ್ರಿಕೆ—I

## ಕನ್ನಡ ಭಾಷಾ ಪೂರಕ

## ಭಾಗ IV & V

ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.

ಕನ್ನಡದಲ್ಲಿಯ ಸೂಚನೆಗಳಿಗಾಗಿ ಈ ಪ್ರಶ್ನೆಪುಸ್ತಿಕೆಯ ಪುಟ ಸಂಖ್ಯೆ **19** ಮತ್ತು **20**ರಲ್ಲಿ ಕೊಟ್ಟ ಸೂಚನೆಗಳನ್ನು ಗಮನವಿಟ್ಟು ಓದಿರಿ.

*ಪರೀಕ್ಷಾರ್ಥಿಗಳಿಗೆ ಸೂಚನೆಗಳು :*

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ **IV** (ಭಾಷೆ I) ಅಥವಾ ಭಾಗ V (ಭಾಷೆ **II**)ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು, ಎರಡನ್ನೂ ಅಲ್ಲ.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II, IIIನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ **IV** ಮತ್ತು Vರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು Vರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು ಕೇವಲ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಸಂಕೇತ **I** ಆಗಿದೆ. ಉತ್ತರ ಪತ್ರಿಕೆಯ ಪುಟ-2ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ಭಾಗಗಳಿವೆ **IV** ಮತ್ತು **V**. ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ. ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ :

   ಭಾಗ **IV** : ಭಾಷಾ **I** – (ಕನ್ನಡ) (ಪ್ರಶ್ನೆ **91**ರಿಂದ **120**)

   ಭಾಗ **V** : ಭಾಷಾ **II** – (ಕನ್ನಡ) (ಪ್ರಶ್ನೆ **121**ರಿಂದ **150**)
7. ಭಾಗ **IV**ರಲ್ಲಿ ಭಾಷೆ Iಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ **V**ರಲ್ಲಿ ಭಾಷೆ **II**ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. ಒಂದು ವೇಳೆ ಭಾಷೆ **I** ಮತ್ತು/ಅಥವಾ **II**ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು – ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.
8. ಪರೀಕ್ಷಾರ್ಥಿ ಭಾಗ **V** (ಭಾಷೆ **II**)ಕ್ಕಾಗಿ, ಭಾಷೆ **I** (ಭಾಗ **IV**)ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ **(OMR)** ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ **(Whitener)** ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ____________________

ಕ್ರಮ ಸಂಖ್ಯೆ (ಅಂಕೆಗಳಲ್ಲಿ) : ____________________

(ಅಕ್ಷರಗಳಲ್ಲಿ) : ____________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ): ____________________

ಪರೀಕ್ಷಾರ್ಥಿಯ ಸಹಿ : ____________ ನಿರೀಕ್ಷಕರ ಸಹಿ : ____________

Facsimile signature stamp of Centre Superintendent ____________________

**ಅಭ್ಯರ್ಥಿಗಳು ಕನ್ನಡವನ್ನು ಭಾಷೆ-I ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-IVರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 91–120) ಉತ್ತರಿಸಬೇಕು.**

Candidates should attempt the questions from **Part–IV (Q. Nos. 91–120)**, if they have opted **KANNADA** as **Language–I** only.

# Part—IV / ಭಾಗ-IV

# Language—I / ಭಾಷೆ-I

# Kannada / ಕನ್ನಡ

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-I ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-IVರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 91–120) ಉತ್ತರಿಸಬೇಕು.

ನಿರ್ದೇಶನಗಳು : ಕೆಳಗಿನ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ 91–105) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :

**91.** ಭಾಷೆಯನ್ನು ಕಲಿಯುವವರಿಗೆ ಉಚ್ಚಾರಣೆ ಮತ್ತು ವಿರಾಮ ಚಿಹ್ನೆಗಳ ಬಳಕೆಯನ್ನು ಹೇಳಿಕೊಡುವಾಗ ಇದನ್ನು ಮುಖ್ಯವಾಗಿ ಕಲಿಸಲಾಗುತ್ತದೆ

(1) ಕಲಿಯುವ ಕೌಶಲ್ಯವನ್ನು ಹರಿತಗೊಳಿಸಲು

(2) ನಿಖರತೆಯನ್ನು ಸುಧಾರಿಸಿಕೊಳ್ಳಲು

(3) ನಿರರ್ಗಳತೆಯನ್ನು ವೃದ್ಧಿಸಿಕೊಳ್ಳಲು

(4) ಸೃಜನಶೀಲತೆಯನ್ನು ಪೋಷಿಸಿಕೊಳ್ಳಲು

**92.** ಭಾಷೆಯ ತರಗತಿಯಲ್ಲಿ 'ಸಂರಚನಾ ವಿಧಾನ' (constructivism) ಎಂದರೆ

(1) ಒಂದೇ ವಿಧವಲ್ಲದ ಅನೇಕ ಉದಾಹರಣೆಗಳನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡಿ ಚೆನ್ನಾಗಿ ತಿಳಿದಂಥ ನಿರ್ಣಯಕ್ಕೆ ಬರುವುದು

(2) ಅಧ್ಯಾಪಕನು ವಿದ್ಯಾರ್ಥಿಗಳಿಗೆ ಅನೇಕ ಮಾಧ್ಯಮಗಳ ಬಳಕೆಯನ್ನು ಆಗುವಂತೆ ಮಾಡಿ, ಅವರದೇ ಆದ ತತ್ವಗಳನ್ನು (Theory) ಸೃಜಿಸಿಕೊಳ್ಳುವ ಹಾಗೆ ಅನುಕೂಲ ಮಾಡಿಕೊಡುವುದು

(3) ವಿದ್ಯಾರ್ಥಿಗಳು ಅನುಭವದ ಮುಖಾಂತರ ಜಗತ್ತಿನ ತಮ್ಮದೇ ಆದ ತಿಳುವಳಿಕೆ ಹಾಗೂ ಜ್ಞಾನವನ್ನು ಪಡೆದುಕೊಂಡು, ಭಾಷೆಯ ಕೌಶಲ್ಯಗಳಲ್ಲಿ ಈ ಅನುಭವಗಳನ್ನು ಮೂಡಿಸುವಂತೆ ಮಾಡುವುದು

(4) ವಿದ್ಯಾರ್ಥಿಗಳು ತಮ್ಮದೇ ಆದ ಕಲಿಯುವ ಸಾಧನಗಳನ್ನು ತಯಾರು ಮಾಡಿಕೊಂಡು, ಅನುಭವಗಳ ಮೇಲೆ ಪ್ರಭುತ್ವ ಸಾಧಿಸುವುದು

**93.** ಭಾರತದಲ್ಲಿ ಪ್ರಾದೇಶಿಕ ಭಾಷೆಯನ್ನು ಅಭಿವೃದ್ಧಿಗೊಳಿಸುವಲ್ಲಿ ನಿಜವಾದ ಸವಾಲು ಎಂದು ಪರಿಗಣಿಸುವಂಥದ್ದು ಈ ಕೆಳಗಿನವುಗಳಲ್ಲಿ ಯಾವುದು?

(1) ಆ ಭಾಷೆಯೊಂದಿಗಿನ ಜನರ ಅಪರಿಚಿತತೆ

(2) ಸೌಲಭ್ಯಗಳ ಕೊರತೆ

(3) ಅದರ ಗ್ರಹಿಕೆಯಲ್ಲಿ ಇರುವ ಅಸ್ಪಷ್ಟತೆ

(4) ಭಾಷಾಂತರದ ಕಠಿಣತೆ

**94.** ಭಾಷೆಯ ಗ್ರಹಿಕೆ (Aquisition) ಎಂದರೆ

(1) ಅವಶ್ಯವಾದ ಶಬ್ದಕೋಶಗಳ ಬಳಕೆ

(2) ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯನ್ನು ಕಲಿಯಲು ವಾತಾವರಣವನ್ನು ಉತ್ತೇಜನಗೊಳಿಸುವ ತಂತ್ರ

(3) ವ್ಯಾಕರಣದ ವಿಶ್ಲೇಷಣೆ ಮತ್ತು ತಿಳುವಳಿಕೆಗೆ ವ್ಯವಸ್ಥಿತವಾದ ದಾರಿ

(4) ಮಾನವ ಜೀವಿಯ ಮಿದುಳಿನ ಭಾಷೆಯನ್ನು ಕಲಿಯುವ ಅಂತಸ್ಥವಾದ ಸಾಮರ್ಥ್ಯ

**95.** ಭಾಷಾ ಅಧ್ಯಾಪಕನು ಬರೆಯುವ ಕೌಶಲ್ಯವನ್ನು ಹೀಗೆ ಕಲಿಸಬಹುದು

(1) ಹೇಳುವುದರ ಮೂಲಕ (Dictation) ಬರೆಸುವುದು

(2) ವಿದ್ಯಾರ್ಥಿಗಳಿಗೆ ಅಂದವಾಗಿ ಬರೆಯಲು ಹೇಳುವುದು

(3) ವಿಚಾರಗಳ ಮೂಲಕ ಮಿದುಳಿಗೆ ಕಸರತ್ತು ಕೊಟ್ಟು, ವಿದ್ಯಾರ್ಥಿಗಳಿಗೆ ಅವರದೇ ಶಬ್ದಗಳಲ್ಲಿ ಬರೆಯಲು ಹೇಳುವುದು

(4) ವಿದ್ಯಾರ್ಥಿಗಳಿಗೆ ಪ್ರಬಂಧಗಳನ್ನು ಬರೆಯಲು ಕೇಳುವುದು

**96.** ಭಾಷೆಯಲ್ಲಿ ಸ್ಫುಟತೆಯನ್ನು ಅಥವಾ ನಿರರ್ಗಳತೆ (Fluency)ಯನ್ನು ಬೆಳೆಸಿಕೊಳ್ಳುವುದು ಹೀಗೆ :

(1) ವಿದ್ಯಾರ್ಥಿಗಳ ಜೊತೆಗೆ ಮಾತನಾಡುವುದು

(2) ವಿದ್ಯಾರ್ಥಿಗಳಿಗೆ ಅರ್ಥವಾಗದಿದ್ದರೆ, ಸುಮ್ಮನೆ ಕುಳಿತುಕೊಳ್ಳಲು ಹೇಳುವುದು

(3) ತಪ್ಪುಗಳನ್ನು ಗುರುತಿಸಿ, ಆ ಕ್ಷಣದಲ್ಲೇ ಅವುಗಳನ್ನು ತಿದ್ದುವುದು

(4) ಭಾಷೆಯನ್ನು ಸಂವಹನಕ್ಕೆ ಅನುಕೂಲವಾಗುವಂತೆ ಅವಕಾಶಗಳನ್ನು ನಿರ್ಮಿಸುವುದು

**97.** ಭಾಷೆಯನ್ನು ಕಲಿಸಲು ಪರಿಣಾಮಕಾರಿಯಾದ ಪಾಠವು ಇದರಿಂದ ಪ್ರಾರಂಭವಾಗುತ್ತದೆ

(1) ಕಲಿಯುವ ಉದ್ದೇಶಗಳನ್ನು ಪಟ್ಟಿ ಮಾಡುವುದು

(2) ವಿದ್ಯಾರ್ಥಿಗಳಿಗೆ ಸಾರಸಂಗ್ರಹವನ್ನು ಹೇಳಿ, (Recapitation) ಕಾರ್ಯಚಟುವಟಿಕೆಯನ್ನು ಮಾಡುವಂತೆ ಪ್ರೋತ್ಸಾಹಿಸುವುದು

(3) ಪಾಠದ ಸಂದರ್ಭವನ್ನು ಹೇಳುವುದರ ಮೂಲಕ

(4) ಕಪ್ಪು ಹಲಗೆಯ ಮೇಲೆ ಬರೆಯುವುದರ ಮೂಲಕ

**98.** ಸುಧಾರಣಾ ಕಲಿಸುವಿಕೆಯು (Remedial Teaching) ಒಂದು _______ ಕೆಲಸ.

(1) ವ್ಯವಸ್ಥಿತಗೊಳಿಸುವ (Orderly)

(2) ಕಲಿಸುವ (Instructional)

(3) ನಿಷೇಧಾತ್ಮಕ (Negative)

(4) ತಾತ್ವಿಕವಾದ (Theoretical)

**99.** ಭಾಷೆಯ ಕೌಶಲ್ಯಗಳನ್ನು ಹೀಗೆ ಕಲಿಸಬೇಕು

(1) ಸ್ಪಷ್ಟವಾದ ವಿವರಣೆಯ ಮುಖಾಂತರ

(2) ಏಕಾಂತದಲ್ಲಿ

(3) ಒಂದು ಸಂಯೋಜಕವಾದ ರೀತಿಯಲ್ಲಿ

(4) ಅನುಕರಣೆಯ ಮೂಲಕ

**100.** ಭಾಷೆಯನ್ನು ಕಲಿಯುವ ಪ್ರಕ್ರಿಯೆಯಲ್ಲಿ, ವಿದ್ಯಾರ್ಥಿಗಳಿಗೆ ಉಚ್ಚಾರಣೆ ಮಾಡುವಾಗ ಆತ್ಮವಿಶ್ವಾಸ ಕಡಿಮೆ ಇರುತ್ತದೆ. ಈ ಕೊರತೆಯನ್ನು ನೀಗಿಸುವುದು ಹೇಗೆ?

(1) ಕ್ಲಾಸ್‌ರೂಮಿನಲ್ಲಿ ಜೋರಾಗಿ ಓದುವುದರ ಮೂಲಕ

(2) ಒಂದು ನಾಟಕವನ್ನು ಸಂಯೋಜಿಸಿ, ಮಕ್ಕಳು ಪರಸ್ಪರ ಮಾತನಾಡುವಂತೆ ಅನುವು ಮಾಡುವುದು

(3) ತಪ್ಪುಗಳನ್ನು ಅದೇ ಜಾಗದಲ್ಲಿ ತಿದ್ದುವುದು

(4) ಭಾಷಾ ಪರಿಣಿತರ ಸಹಾಯದಿಂದ, ವಿಶೇಷ ಚಟುವಟಿಕೆಗಳನ್ನು ಏರ್ಪಡಿಸುವುದು

**101.** ಪ್ರಶ್ನೆಪತ್ರಿಕೆಗಳನ್ನು ತಯಾರು ಮಾಡಿದ ಮೇಲೆ, ಶಿಕ್ಷಕಿಯು ಪರೀಕ್ಷಣದ ಉದ್ದೇಶಗಳನ್ನು ಪರೀಕ್ಷಿಸುತ್ತಾಳೆ. ಪ್ರಶ್ನೆಪತ್ರಿಕೆಯ ಯಾವ ಸ್ವರೂಪದ ಮೇಲೆ ಶಿಕ್ಷಕಿಯ ಪ್ರಮುಖವಾದ ಗಮನ ಇರುತ್ತದೆ?

(1) ವಿಷಯದ ವಸ್ತು ಸಂಪೂರ್ಣವಾಗಿ ಒಳಗೊಂಡಿರುವುದು (Content coverage)

(2) ಪ್ರಶ್ನೆಗಳ ಪ್ರಕಾರಗಳು (Types of question)

(3) ವಿಶ್ವಸನೀಯತೆ (Reliability)

(4) ಯುಕ್ತಾಯುಕ್ತತೆ ಅಥವಾ ಸಾಂಗತ್ಯತೆ (Validity)

**102.** _____ ಕಠಿಣತೆಯು ಓದುವುದರ ಕಠಿಣತೆಯ ಗುರುತು ಅಲ್ಲ.

(1) ಅಕ್ಷರ ಮತ್ತು ಪದದ ಗುರುತಿಸುವಿಕೆಯ

(2) ಉಚ್ಚಾರಣೆಯ ನಿಯತತೆಯಲ್ಲಿನ

(3) ಓದುವುದರ ವೇಗ ಮತ್ತು ಸ್ಫುಟತೆಯ

(4) ಪದಗಳು ಮತ್ತು ವಿಚಾರಗಳ ತಿಳುವಳಿಕೆಯ

**103.** ಈ ಕೆಳಗಿನ ಹೇಳಿಕೆಯಲ್ಲಿ ಯಾವುದು ಭಾಷೆಯ ಸ್ವಭಾವದ ಬಗ್ಗೆ ಸರಿಯಾದ ಹೇಳಿಕೆ ಅಲ್ಲ?

(1) ಪ್ರತಿಯೊಂದು ಭಾಷೆಗೂ ಅದರದೇ ಆದ ಸಂರಚನೆ ಇರುತ್ತದೆ.

(2) ಭಾಷೆಯು ಸಂಸ್ಕೃತಿ ಮತ್ತು ನಾಗರಿಕತೆಗೆ ಸಂಬಂಧಿಸಿದ್ದಾಗಿರುತ್ತದೆ.

(3) ಭಾಷೆಯು ಸರಳತೆಯಿಂದ ಸಂಕೀರ್ಣತೆಯ ಕಡೆಗೆ ಚಲಿಸುತ್ತದೆ.

(4) ಭಾಷೆಯು ಸಂಶ್ಲೇಷಣೆಯಿಂದ (Synthesis) ವಿಶ್ಲೇಷಣೆಯ (Analysis) ಕಡೆಗೆ ಚಲಿಸುತ್ತದೆ.

**104.** ಈ ಕೆಳಗಿನ ಯಾವ ತರಗತಿಯ ಅಭ್ಯಾಸಗಳು ಮೌಖಿಕ ಭಾಷೆಯ ಬೆಳವಣಿಗೆಗೆ ಸಹಾಯಕವಾಗುತ್ತವೆ?

(1) ಅಧ್ಯಾಪಕರ ಜೊತೆಗೆ ಪಠ್ಯದಲ್ಲಿರುವ ಕಥೆಯನ್ನು ಒಟ್ಟಾಗಿ ಓದುವುದು

(2) ಪದಗಳ ಸರಿಯಾದ ಉಚ್ಚಾರಣೆಯನ್ನು ಒಟ್ಟಾಗಿ ಅಭ್ಯಾಸ ಮಾಡುವುದು

(3) ಕವನಗಳನ್ನು ವೈಯಕ್ತಿಕವಾಗಿ ನೆನಪಿನಲ್ಲಿ ಇಟ್ಟುಕೊಳ್ಳುವುದು ಮತ್ತು ವಾಚಿಸುವುದು

(4) ಪ್ರಿಯವಾದ ಕಥೆಗಳನ್ನು ನಾಟಕೀಯವಾಗಿಸಿ ಭಾಗವಹಿಸುವಂತೆ ಮಾಡುವುದು

**105.** ವೇಗವಾದ ಓದುವಿಕೆಯ (Rapid Reading) ಉದ್ದೇಶವು

(1) ಆಸಕ್ತಿಯನ್ನು ಹುಟ್ಟಿಸುವುದಾಗಿದೆ

(2) ನಿರ್ದಿಷ್ಟ ವಿವರವನ್ನು ತಿಳಿಯುವುದಾಗಿದೆ

(3) ಅಧಿಕವಾದ ಓದನ್ನು ಮಾಡುವುದು (Extended Reading) ಆಗಿದೆ

(4) ಮಾಹಿತಿಯನ್ನು ತಿಳಿಯುವುದಾಗಿದೆ

ನಿರ್ದೇಶನಗಳು : ಕೆಳಗಿನ ಗದ್ಯವನ್ನು ಓದಿ ಅನುಸರಿಸಿ ಬರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **106–114**) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :

ಈ ಕಾಗದವನ್ನು ಓದುತ್ತಲೇ ನಾನು ಸ್ಟೇಷನ್ನಿಗೆ ಹೊರಟೆನು. ಸಕಲಾವತಿಯು ನಾನು ಹೋಗುವುದನ್ನು ಅಡ್ಡೈಸುತ್ತ ಮನಸ್ಸಿನಲ್ಲಿಯೇ ಏನನ್ನೋ ಗುಣಗುಟ್ಟುತ್ತಿದ್ದಳು. ಮುದ್ದಣನು ತಾನೂ ಬರುತ್ತೇನೆಂದು ಹೇಳಿ ಹೊರಟನು.

ನಾನು 'ಪ್ಲೇಗ್ ಸ್ಟೇಶನನ್ನು' ಮುಟ್ಟಿದಾಗ ಸಾಯಂಕಾಲ ಆರು ಗಂಟೆ ಹೊಡೆದಿತ್ತು. ಚಿಕ್ಕ ತಂದೆಯವರು ತೆಂಗಿನ ಎಲೆಯ ಗುಡಿಸಲಿನಲ್ಲಿ ಮಲಗಿದ್ದರು. ಅವರನ್ನು ದೂರದಿಂದಲೇ ನಾವು ನಿಂತು ನೋಡಿದೆವು. ಚಿಕ್ಕ ತಂದೆಯವರು ನಮ್ಮನ್ನು ನೋಡಿ ನಗಾಡಿದರು ''ಈ ಪಾಪಿಗಳು ನನಗೆ ಪ್ಲೇಗ್ ಸೋಂಕಿದೆ ಎಂದು ಸುಳ್ಳು ಮಾಡಿ, ನನ್ನನ್ನು ನಾನಾ ರೀತಿಯಲ್ಲಿ ಉಪದ್ರಪಡಿಸುವರು'' ಎಂದು ನನ್ನಲ್ಲಿ ಮೊರೆಯಿಟ್ಟರು. ಅವರ ಮಾತುಗಳ ಸ್ವರವೇ ಬದಲಾಗಿತ್ತು. ನನಗೆ ಹತ್ತಿರ ಹೋಗಲು ಧೈರ್ಯ ಸಾಲಲಿಲ್ಲ.

''ಜ್ವರವುಂಟೇ''? ಎಂದು ನಾನು ಕೇಳಿದೆನು.

ಚಿಕ್ಕತಂದೆ – 'ಜ್ವರ? ಯಾರಿಗೆ ಜ್ವರ? ನನಗೆ ಸ್ವಲ್ಪ ಚೈತನ್ಯ ಕಡಿಮೆಯಾಗಿದೆ. ಈ ಬಡ್ಡೀಮಕ್ಕಳು ನನ್ನಿಂದ ಇಪ್ಪತ್ತು ರೂಪಾಯಿ ಹಾರಿಸಬೇಕೆಂದು ಇದ್ದರು. ಅದನ್ನು ನಾನು ಕೊಡದೇ ಹೋದುದ್ದರಿಂದ, ಇಷ್ಟು ಸಂಕಷ್ಟಕ್ಕೆ ಗುರಿ ಮಾಡಿದರು''.

ಅಷ್ಟರಲ್ಲಿ ಕಾವಲಿದ್ದ ಪೋಲೀಸಿನವನು ನನ್ನ ಹತ್ತಿರ ಬಂದು, ''ಅಯ್ಯಾ, ಪ್ಲೇಗ್ ರೋಗದಲ್ಲಿ ಮರಣಕ್ಕೆ ಮೊದಲು ರೋಗಿಯು ಸರಿಯಾಗಿ ಮಾತನಾಡುವನು. ಬುದ್ಧಿಭ್ರಂಶತೆ ಏನೇನೂ ಇರುವುದಿಲ್ಲ'' ಎಂದನು.

ಈ ಮಾತುಗಳನ್ನು ಕೇಳಿ ಚಿಕ್ಕ ತಂದೆಯವರು ''ಓಹೋ ನಾನು ಸಾಯಲಾರೆನು. ನಾನು – ಓ ಕೆಂಪು ಮುಂಡಾಸ್! ನಾನು ನಿಮ್ಮ ಸಾವನ್ನು ನೋಡಿದ ಹೊರತು ಸಾಯಲಾರೆನು'' ಎಂದು ಹೇಳಿ ಗುಡಿಸಲಿನ ಹೊರಬರುವುದಕ್ಕೆ ಪ್ರಯತ್ನಿಸುತ್ತಿದ್ದರು.

''ರೋಗಿಗೆ ವಾಂತಿಯಾಗಿದೆ'' ಎಂದು ಹೇಳಿ ಜಮೇದಾರನು ಒಂದು ಬಟ್ಟಲನ್ನು ರೋಗಿಯ ಇದಿರಿಗೆ ತಂದಿಟ್ಟರು. ರೋಗಿಯು ಅದನ್ನು ಬಿಸಾಡಿಬಿಟ್ಟನು. ಬಟ್ಟಲು ಚೂರು ಚೂರಾಯಿತು. ''ಜ್ವರವು ರೋಗಿಯ ತಲೆಗೆ ಏರುತ್ತ ಬಂದಿದೆ. ಈಗ ರೋಗಿಯೊಡನೆ ನೀವು ಮಾತನಾಡುವುದು ಸರಿಯಲ್ಲ'' ಎಂದು ಪೋಲೀಸಿನವನು ನನಗೆ ಚಿಕ್ಕ ತಂದೆಯವರೊಡನೆ ಮಾತನಾಡಗೊಡಿಸದೆ ಹೋದನು.

ನಾನು ಬಂಡಿಯನ್ನು ಹತ್ತಿ ಡಾಕ್ಟರನು ಇದ್ದೆಡೆಗೆ ಹೋಗಿ ವಿಚಾರಿಸಿದೆನು. ಡಾಕ್ಟರನು ಹಿಂದಿನ ರಿಪೋರ್ಟನ್ನು ನೋಡಿ, ಚಿಕ್ಕ ತಂದೆಯವರಿಗೆ ''ಪ್ಲೇಗ್ ಸೋಂಕಿದೆ'' ಎಂದು ದೃಢಪಡಿಸಿದನು. ಈ ಮಾತಿನಿಂದ ನನಗೆ ಸಂತೋಷವಾಯಿತೋ, ಸಂತಾಪವಾಯಿತೋ ಈಗ ಹೇಳಲು ಬರುವುದಿಲ್ಲ, ನಾನು ಓಡತೊಡಗಿದೆನು. ಮನೆಗೆ ಹೋಗಿ ಸಕಲಾವತಿಗೆ ಇದನ್ನೆಲ್ಲಾ ನಾನು ತಿಳಿಸುತ್ತಲೇ ಅವಳು ಬೆಚ್ಚಿಬಿದ್ದಳು. ನಾನು ಮರಳಿ ಅಲ್ಲಿಗೆ ಹೋಗಬಾರದೆಂದು ತನ್ನ ಮೇಲೆ ಆಣೆಯಿಟ್ಟು ನನ್ನನ್ನು ಬೇಡಿದಳು.

''ಚಿಕ್ಕ ತಂದೆ ಬದುಕುವುದೂ, ಸಾಯುವುದೂ ದೇವರ ಇಚ್ಛೆ, ಅವರ ಕಡೆಗಾಲದಲ್ಲಿ ನಾನು ಅವರ ಹಾಸಿಗೆಯ ಹತ್ತಿರವಿಲ್ಲದಿದ್ದರೆ, ಜನಗಳು ಏನೆನ್ನುವರು?''

''ಹಾಸಿಗೆಯ ಹತ್ತಿರ ಹೋಗುವುದುಂಟೇ? ಅಯ್ಯೋ ಜನಗಳು ಬಾಯಿಗೆ ಬಂದಂತೆ ಹರಟುವರು. ಅದು ಹೋಗಲಿ! ಪರರ ಮರಣವನ್ನು ನೋಡಿದರೆ, ಉಳಿದವರು ವೈರಾಗ್ಯ ಮನಸ್ಕರಾಗುವರಂತೆ. ಇದು ನಿಜವೇ?'' ಎಂದು ಸಕಲಾವತಿ ಭೀತಿಯಿಂದ ಕೇಳಿದಳು.

''ವೈರಾಗ್ಯವು ಬರಬೇಕಾದರೆ ಮೊದಲು ಸಂಸಾರ ಜ್ಞಾನವು ಪೂರ್ಣವಾಗಬೇಕು. ಪ್ರಪಂಚದಲ್ಲಿ ವೈರಾಗ್ಯವನ್ನು ಹೊದ್ದುಕೊಂಡ ಸಂತ ಪುರುಷರೆಲ್ಲರೂ ಸಂಸಾರ ಸಾಗರವನ್ನು ಈಸಿಕೊಂಡು, ಸೋತುಹೋಗಿ, ವೈರಾಗ್ಯ ತೀರವನ್ನು ಸೇರಿದರು. ಮರಣವನ್ನು ನೋಡಿದರೆ ಸ್ಮಶಾನ ವೈರಾಗ್ಯವು ಕೆಲವರಿಗೆ ಉಂಟಾಗುವುದು. ಅಂಥ ಮರಣದಿಂದ ಧನಪ್ರಾಪ್ತಿ ಯಾಗುವುದೂ ಉಂಟು. ಅನೇಕರು ಈ ವೈರಾಗ್ಯವನ್ನು ಆಶಿಸುವರು.''

ಇಂತಹ ಸಂಭಾಷಣೆಯಿಂದಲೂ ಸುಖ ಸಲ್ಲಾಪದಿಂದಲೂ ನಾನು ಸಕಲಾವತಿಯ ಮನಸ್ಸನ್ನು ರಂಜಿಸುತ್ತ, ಅವಳ ಅಪ್ಪಣೆಯನ್ನು ಹೊಂದಿ, ರಾತ್ರಿಯೇ ಚಿಕ್ಕ ತಂದೆಯವರಿದ್ದ 'ಪಾಸ್‌ಪೋರ್ಟ್ ಸ್ಟೇಶನ್'ಗೆ ನಡೆದೆನು.

**106.** ಈ ಕಥಾಭಾಗದಲ್ಲಿ ಬರುವ ಪಾತ್ರಗಳ ಸಂಖ್ಯೆ

(1) ಏಳು
(2) ಐದು
(3) ಆರು
(4) ನಾಲ್ಕು

**107.** 'ಓ, ಕೆಂಪು ಮುಂಡಾಸ್' - ಎಂದು ಕರೆದದ್ದು ಯಾರನ್ನು?

(1) ನಿರೂಪಕನನ್ನು

(2) ಪೋಲೀಸ್‌ನನ್ನು

(3) ಯಮರಾಯನನ್ನು

(4) ತನ್ನನ್ನೇ

**108.** ಸಕಲಾವತಿಗೆ ಇದ್ದಂಥ ಆತಂಕ

(1) ಚಿಕ್ಕ ತಂದೆ ಸಾಯುವರು ಎಂದು

(2) ರೋಗ ತನಗೂ ಬಂದೀತು ಎಂದು

(3) ತನ್ನ ಗಂಡ ವೈರಾಗ್ಯ ಹೊಂದಬಹುದು ಎಂದು

(4) ರೋಗವು ಊರಿನ ತುಂಬ ಹರಡಬಹುದು ಎಂದು

**109.** ಪೋಲೀಸನು ಕಾವಲಿದ್ದದ್ದು ಯಾರನ್ನು ನೋಡಿಕೊಳ್ಳಲಿಕ್ಕಾಗಿ?

(1) ಕಳ್ಳನು ಓಡಿಹೋಗಬಾರದೆಂದು

(2) ಚಿಕ್ಕ ತಂದೆಯ ಸಾವಿನ ಸಂದರ್ಭದಲ್ಲಿ, ಅವರ ಮೇಲಿನ ಪ್ರೀತಿಯಿಂದ ನೋಡಿಕೊಳ್ಳಲು

(3) ರೋಗಿಯನ್ನು ಯಾರೂ ಮುಟ್ಟಿ ಮಾತನಾಡಿಸಬಾರದೆಂದು

(4) ವೈರಿಗಳಿಂದ ಸಾಯುವ ರೋಗಿಯನ್ನು ಕಾಪಾಡಲೆಂದು

**110.** ಚಿಕ್ಕ ತಂದೆಯನ್ನು ತೆಂಗಿನ ಎಲೆಯ ಗುಡಿಸಲಿನಲ್ಲಿ ಮಲಗಿಸಲು ಕಾರಣ

(1) ರೋಗಿಗೆ ತಂಪು ಜಾಗದ ಅವಶ್ಯಕತೆ ಇದೆ ಎಂದು

(2) ಚಿಕ್ಕತಂದೆಯು ಅತ್ಯಂತ ಬಡವನಾಗಿದ್ದುದರಿಂದ

(3) ಚಿಕ್ಕತಂದೆಯ ರೋಗ ಹೆಚ್ಚಾಗಿದ್ದುದರಿಂದ

(4) ಸೋಂಕು ರೋಗ ಬೇರೆ ಯಾರಿಗೂ ಬರಬಾರದು ಎನ್ನುವ ಕಾರಣದಿಂದ

**111.** ಈ ಕಥೆಯಲ್ಲಿ ಕಂಡುಬರುವ ಆಶ್ಚರ್ಯಸೂಚಕ ಪದ

(1) ಅಯ್ಯಾ!

(2) ಓಹೋ!

(3) ಜ್ವರ ಉಂಟೆ?!

(4) ಅಯ್ಯೋ!

**112.** 'ಕಡೆಗಾಲದಲ್ಲಿ' - ಈ ಪದದಲ್ಲಿ ಇರುವ ವಿಭಕ್ತಿ ಪ್ರತ್ಯಯ

(1) ದ್ವಿತೀಯಾ

(2) ಷಷ್ಠಿ

(3) ಪ್ರಥಮಾ

(4) ಸಪ್ತಮಿ

**113.** 'ಏರುತ್ತ' ಪದದ ವಿರುದ್ಧ ಪದವು ______

(1) ಇಳಿಯುತ್ತ

(2) ಹಾರುತ್ತ

(3) ಹರಿಯುತ್ತ

(4) ನಿಧಾನಿಸುತ್ತ

**114.** 'ಉಪದ್ರಪಡಿಸು' ಅಂದರೆ

(1) ತುಂಟಾಟ ಮಾಡು

(2) ಹೆದರಿಸು

(3) ತೊಂದರೆ ಕೊಡು

(4) ತಮಾಷೆ ಮಾಡು

ನಿರ್ದೇಶನ : ಕೆಳಗಿನ ಪದ್ಯವನ್ನು ಓದಿ ಅನುಸರಿಸಿ ಬರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **115–120**) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ:

> ಏಳು ಚಿನ್ನ, ಬೆಳಗಾಯ್ತು ಅಣ್ಣ, ಮೂಡಲವು ತೆರೆಯೆ ಕಣ್ಣ
> ನಕ್ಷತ್ರ ಜಾರಿ, ತಮವೆಲ್ಲ ಸೋರಿ, ಮಿಗಿಲಹುದು ಬಾನ ಬಣ್ಣ.
> ಜೇನ್ನೊಣದ ಹೆದೆಗೆ ಹೂಬಾಣ ಹೂಡಿ ಝುಂ ಎಂದು ಬಿಟ್ಟ ಮಾರ
> ಗುಡಿಗೋಪುರಕ್ಕೂ ಬಲೆ ಬೀಸಿ ಬಂದ ಅಗೋ ಬೆಳಕು - ಬೇಟೆಗಾರ

**115.** ಈ ಕವನದ ವಸ್ತು ಯಾವುದು?

(1) ಬೆಳಕಿನ ವರ್ಣನೆ

(2) ಬೆಳಗಿನ ಜಾವದ ವರ್ಣನೆ

(3) ಬೇಟೆಗಾರನ ವರ್ಣನೆ

(4) ನಕ್ಷತ್ರಗಳ ವರ್ಣನೆ

**116.** ಬಾನಿನ ಬಣ್ಣವನ್ನು ಕುರಿತ ವರ್ಣನೆ ಏನನ್ನು ಹೇಳುತ್ತಿದೆ?

(1) ಅಂಧಕಾರ ಇಲ್ಲವಾದುದರಿಂದ ಆಕಾಶಕ್ಕೆ ಬೆಳ್ಳಗಿನ ಬಣ್ಣ ಬಂದಿದೆ ಎಂದು

(2) ಸೂರ್ಯ ಹುಟ್ಟಿದ್ದರಿಂದ ಆಕಾಶಕ್ಕೆ ಬೆಳಕಿನ ಬಣ್ಣ ಬಂದಿದೆ ಎಂದು

(3) ಬೆಳಗಾಗಿರುವುದರಿಂದ ಆಕಾಶಕ್ಕೆ ಬಣ್ಣ ಬಂದಿದೆ ಎಂದು

(4) ಕತ್ತಲು ಸೋರಿಹೋಗಿದ್ದುದರಿಂದ ಆಕಾಶದ ಬಣ್ಣ ಚೆನ್ನಾಗಿದೆ ಎಂದು

**117.** 'ಮೂಡಲವು ತೆರೆಯೆ ಕಣ್ಣ' - ಈ ಮಾತಿನಲ್ಲಿ ಇರುವ ಭಾವ

(1) ಆಶ್ಚರ್ಯದ ಭಾವ

(2) ಪ್ರಕೃತಿಯ ಸಹಜ ಭಾವ

(3) ಚೇತನಾರೋಪ ಭಾವ

(4) ಪ್ರೀತಿಯ ಭಾವ

**118.** ಬೆಳಕನ್ನು ಇಲ್ಲಿ ಹೋಲಿಸಲಾಗಿರುವ ರೀತಿಯು

(1) ಲೋಕವನ್ನು ಸೆರೆಹಿಡಿಯುವ ಬೇಟೆಗಾರನ ಭಾವದ ಸೂಚನೆ

(2) ಕತ್ತಲನ್ನು ಹೊಡೆದೋಡಿಸಿದ ಭಾವದ ಸೂಚನೆ

(3) ಲೋಕಕ್ಕೆ ಬೆಳಗಾಗಿಸಿದ ಧನ್ಯತೆಯ ಭಾವದ ಸೂಚನೆ

(4) ಪ್ರೀತಿಯನ್ನು ಲೋಕದ ಜನರಲ್ಲಿ ಉಂಟು ಮಾಡಿದ ಭಾವದ ಸೂಚನೆ

**119.** 'ಹೂಬಾಣ' - ಅನ್ನುವುದಕ್ಕೆ ಇರುವ ಸಾಂಕೇತಿಕ ಅರ್ಥ

(1) ಮೃದುವಾದ ಬಾಣ

(2) ಕಾಮನಬಿಲ್ಲು

(3) ಕಾಮನ ಬಾಣ

(4) ಹೂವಿನ ಬುಟ್ಟಿ

**120.** 'ಮಾರ' ಎನ್ನುವ ಪದದ ಅರ್ಥ

(1) ಹೊಡೆದಾಟ ಮಾಡುವ ಹುಡುಗ

(2) ಬೇಟೆಯಾಡುವ ಹುಡುಗ

(3) ಯೌವನದ ಹುಡುಗ

(4) ಮನ್ಮಥ

**ಅಭ್ಯರ್ಥಿಗಳು ಕನ್ನಡವನ್ನು ಭಾಷೆ-II ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-Vರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 121–150) ಉತ್ತರಿಸಬೇಕು.**

Candidates should attempt the questions from **Part–V (Q. Nos. 121–150)**, if they have opted **KANNADA** as **Language–II** only.

# Part—V / ಭಾಗ-V

# Language—II / ಭಾಷೆ-II

# Kannada / ಕನ್ನಡ

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-II ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-Vರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 121–150) ಉತ್ತರಿಸಬೇಕು.

ನಿರ್ದೇಶನ : ಕೆಳಗಿನ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 121–135) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ:

**121.** ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗೆ ಕೇಳುವ ಮತ್ತು ಮಾತನಾಡುವ ಕೌಶಲ್ಯವರ್ಧನೆಗೆ ಈ ಕೆಳಗಿನ ಯಾವ ಉಪಾಯವು ಹೆಚ್ಚು ಉಪಯುಕ್ತವಾಗ ಬಲ್ಲದು?

(1) ಕಥೆ ಹೇಳುವುದು ಮತ್ತು ಉತ್ಫಲನ (Dictation)

(2) ಪದ್ಯವನ್ನು ಹಾಡುವುದು ಮತ್ತು ಭಾಷಾ ಪ್ರಯೋಗಶಾಲೆ (Language Library)

(3) ಅಭಿನಯ ಮತ್ತು ಸುದ್ದಿ-ಸಮಾಚಾರ ಓದುವುದು

(4) ಅಭಿನಯ ಮತ್ತು ಪರಸ್ಪರ ಸಂವಾದ (Interaction)

**122.** ಭಾಷೆಯ ಸಂದರ್ಭದಲ್ಲಿ ಸುಧಾರಣಾ (Remedial) ಕಲಿಸುವಿಕೆಯ ಗುರಿ ಇದು ಆಗಿದೆ :

(1) ವಿದ್ಯಾರ್ಥಿಗಳ ಪ್ರಾರಂಭಿಕ ತಪ್ಪುಗಳ ಸುಧಾರಣೆ

(2) ಜ್ಞಾನಕ್ಕೆ ಸಂಬಂಧಿಸಿದ ತಪ್ಪುಗಳಲ್ಲಿನ ಸುಧಾರಣೆ

(3) ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವುದು

(4) ಮೇಲಿನ ಎಲ್ಲವೂ

**123.** ಭಾಷೆಯ ಸಾಮಾನ್ಯ ತಿಳುವಳಿಕೆಯನ್ನು ಮೌಲ್ಯಮಾಪನ ಮಾಡಲು ಯಾವ ಬಗೆಯ ಪ್ರಶ್ನೆಗಳು ಹೆಚ್ಚು ಸೂಕ್ತವಾಗಿವೆ?

(1) ಸಂಕ್ಷಿಪ್ತ ಉತ್ತರ ಕೊಡುವ ರೀತಿಯವು

(2) ದೀರ್ಘ ಉತ್ತರ ಕೊಡುವಂಥವು

(3) ಪ್ರಬಂಧ ಮಾದರಿಯವು

(4) ವಸ್ತುನಿಷ್ಠ ಮಾದರಿಯವು (Objective type)

**124.** 'ಭಾಷೆಯ ಕಲಿಕೆಯ ಅಂತಸ್ಥ ಸಾಮರ್ಥ್ಯವನ್ನು ಮಕ್ಕಳು ಹುಟ್ಟುತ್ತಲೇ ಪಡೆದಿರುತ್ತಾರೆ.' - ಈ ಮಾತನ್ನು ಹೇಳಿದವರು

(1) ಜೀನ್ ಪೀಗೆಟ್

(2) ಚಾಮ್‌ಸ್ಕಿ

(3) ವೈಗೋಸ್ಕಿ

(4) ಪಾವ್ಲೋವ್

**125.** ಹಿಂದಿ ಮಾತನಾಡುವ ಪ್ರಾಂತ್ಯದಿಂದ ಒಂದು ಹೆಣ್ಣು ಮಗು ನಿಮ್ಮ ಪ್ರದೇಶಕ್ಕೆ ಬಂದಿದೆ ಎಂದುಕೊಳ್ಳೋಣ. ನಿಮ್ಮ ಭಾಷೆಯನ್ನು ಮಾತನಾಡುವಾಗ ಅವಳು ತಪ್ಪುಗಳನ್ನು ಮಾಡುತ್ತಾಳೆ. ಒಬ್ಬ ಅಧ್ಯಾಪಕಿಯಾಗಿ ಯಾವ ಹೇಳಿಕೆಯನ್ನು ನೀವು ಸರಿಯಾದ ಹೇಳಿಕೆಯೆಂದು ಪರಿಗಣಿಸುತ್ತೀರಿ?

(1) ಹೆಣ್ಣುಮಗು ಮಾಡುವ ತಪ್ಪುಗಳನ್ನು ಮತ್ತೆ ಮತ್ತೆ ಜ್ಞಾಪಿಸಬೇಕು

(2) ಭಾಷೆಯ ಉಪಯೋಗಕ್ಕೆ ಸಂಬಂಧಿಸಿದಂತೆ ಅವಳಿಗೆ ಹೆಚ್ಚು ಅವಕಾಶ ಕೊಡಬೇಕು

(3) ಈ ಹೊಸ ಭಾಷೆಯಲ್ಲಿ ದಿನವೂ ಅರ್ಧ ಗಂಟೆ ಮಾತನಾಡಿ ಅಭ್ಯಾಸ ಮಾಡುವಂತೆ ಹೇಳಬೇಕು

(4) ಹೊಸ ಭಾಷೆಯ ಪ್ರಯೋಗದಲ್ಲಿ ಅವಳ ಮಾತೃಭಾಷೆಯ ಪರಿಣಾಮಗಳು ಪ್ರವೇಶ ಆಗದಂತೆ ತಡೆಗಟ್ಟಬೇಕು

**126.** ಈ ಕೆಳಗಿನ ಯಾವ ಉದ್ದೇಶಗಳಲ್ಲಿ ಭಾಷೆಯನ್ನು ಕಲಿಯುವ ಅವಶ್ಯಕತೆಯು ಇರುವುದಿಲ್ಲ?

(1) ಜೀವನದ ವಿಭಿನ್ನ ಘಟ್ಟಗಳನ್ನು ತಿಳಿಯುವಲ್ಲಿ

(2) ಭಾಷೆಯ ಪರಿಜ್ಞಾನವನ್ನು ಕಲಿಯುವಲ್ಲಿ (Comprehension)

(3) ಅಂತರ್‌ವಾಣಿಯನ್ನು ಹೇಳುವಲ್ಲಿ ಮತ್ತು ಕೇಳುವಲ್ಲಿ

(4) ಜೀವನದ ವಿವಿಧ ಅವಶ್ಯಕತೆಗಳನ್ನು ಪೂರೈಸುವಲ್ಲಿ

**127.** ಭಾಷೆಯ ಸಂದರ್ಭದಲ್ಲಿ, ಈ ಕೆಳಗಿನವುಗಳಲ್ಲಿ ಯಾವುದು ಪ್ರಬಂಧ ಮಾದರಿಯ ಪರೀಕ್ಷೆಗೆ ಲಾಭದಾಯಕವಾಗಿದೆ?

(1) ಬರವಣಿಗೆಯ ಭಾಷೆಯಲ್ಲಿ, ವಿದ್ಯಾರ್ಥಿಯ ವಿಚಾರಗಳನ್ನು ಹೊಂದಿಸುವ ಸಾಮರ್ಥ್ಯವನ್ನು, ಮೌಲ್ಯಮಾಪನ ಮಾಡುವಲ್ಲಿ ಸಹಾಯವಾಗುವುದಾದರೆ

(2) ಪರೀಕ್ಷೆಯಲ್ಲಿ ಕೆಲವು ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ಕಲಿಯಲು ಸಹಾಯ ಮಾಡುವುದಾದರೆ

(3) ವಿದ್ಯಾರ್ಥಿಗಳು ಕೆಲವೇ ಪ್ರಶ್ನೆಗಳಿಗೆ ಉತ್ತರ ಕೊಡುವಂತಾಗಿ - ಅವರು ಕಲಿಯಲು ಸಮಯವನ್ನು ಉಳಿತಾಯ ಮಾಡುವಂತಾದರೆ

(4) ಪೂರ್ಣ ಪಠ್ಯಕ್ರಮವನ್ನು ಅದು ಒಳಗೊಳ್ಳುವಂತಾದರೆ

**128.** ವಿಶೇಷ ಅವಶ್ಯಕತೆಯಿರುವ ಮಕ್ಕಳಿಗೆ ಬರವಣಿಗೆಯ ಕೌಶಲ್ಯವನ್ನು ಅಭ್ಯಸಿಸಲು ______ ಅವಶ್ಯಕತೆ ಇದೆ.

(1) ವಿಚಾರಗಳ ನವೀನತೆ (Originality of thoughts)

(2) ಸಾಂಕೇತಿಕ ಭಾಷೆಯ ಉಪಯೋಗ

(3) ಸರಿಯಾದ ಶಬ್ದಕೋಶದ (Vocabulory) ಪ್ರಯೋಗ

(4) ನೀಟಾದ ಕೈಬರವಣಿಗೆ

**129.** ಭಾಷೆಯಲ್ಲಿ ನಿರಂತರ ಮತ್ತು ಸಂಪೂರ್ಣವಾದ ಮೌಲ್ಯಮಾಪನಕ್ಕೆ ಯಾವುದಕ್ಕೆ ಒತ್ತುಕೊಡಬೇಕು?

(1) ಸರಿಯಾದ ಶಬ್ದಾವಳಿ (ಶಬ್ದಕೋಶ) (Vocabulory)

(2) ಪ್ರಾಜೆಕ್ಟ್ ಕೆಲಸ

(3) ಸರಿಯಾದ ಉಚ್ಚಾರಣೆ

(4) ವಿಭಿನ್ನ ಸಂದರ್ಭಗಳಲ್ಲಿ ಭಾಷೆಯನ್ನು ಬಳಸುವ ಸಾಮರ್ಥ್ಯ

**130.** ಬಹುಭಾಷಿಕತೆಯು

(1) ಭಾಷೆಯನ್ನು ಕಲಿಸುವಲ್ಲಿ ತೊಂದರೆಯನ್ನುಂಟು ಮಾಡುತ್ತದೆ

(2) ಭಾಷೆಯ ಸಂಪನ್ಮೂಲಗಳಿಗೆ ಅಪಾಯಕಾರಿ

(3) ಭಾಷಾ ಕಲಿಕೆಯಲ್ಲಿ ಮಹತ್ವದ ಸಂಪನ್ಮೂಲ

(4) ಭಾಷಾ ಕಲಿಕೆಯಲ್ಲಿ ಸಮಸ್ಯೆಯನ್ನು ಉಂಟು ಮಾಡುತ್ತದೆ

**131.** ಭಾಷೆಯ ಪ್ರಾಥಮಿಕ ಸ್ವರೂಪವು

(1) ಸಾಂಕೇತಿಕ ಭಾಷೆಯಾಗಿದೆ

(2) ವ್ಯಾಕರಣವಾಗಿದೆ

(3) ಬರಹದ ಭಾಷೆಯಾಗಿದೆ

(4) ಮೌಖಿಕ ಭಾಷೆಯಾಗಿದೆ

**132.** ಪ್ರಾಥಮಿಕ ಘಟ್ಟದಲ್ಲಿ ಕಥೆಯ ಹಾಗೂ ಕವನಗಳಲ್ಲಿ ಯಾವ 'ಬಗೆ'ಯು ನಿಮ್ಮ ಪ್ರಕಾರ ಅತ್ಯಂತ ಮಹತ್ವದ್ದಾಗಿದೆ?

(1) ಅವುಗಳು ಮೌಲ್ಯಗಳನ್ನು ಉದ್ದೇಶಿಸುವಂಥವು ಗಳಾಗಿರಬೇಕು

(2) ಕವನಗಳು ಮತ್ತು ಕಥೆಗಳು ಶಬ್ದಕೋಶ, (ಅಥವಾ ಶಬ್ದಾವಳಿ) (Vocabulory) ಗಳಲ್ಲಿ ಶ್ರೀಮಂತವಾಗಿರಬೇಕು

(3) ಅನೇಕ ಮಹತ್ವದ ಹೆಸರುಗಳು ಹಾಗೂ ಘಟನೆ ಗಳು ಪುನರಾವರ್ತನೆಗೊಳ್ಳುವಂತಿರಬೇಕು

(4) ಮಹತ್ವದ ಬರಹಗಾರರ ಕವನಗಳು ಅಥವಾ ಕಥೆಗಳು ಇರಬೇಕು

**133.** ಭಾಷೆಯಲ್ಲಿ ವ್ಯಾಕರಣದ ಕಲಿಸುವಿಕೆಯು ______ ಸುಧಾರಿಸುವಲ್ಲಿ ಸಹಾಯ ಮಾಡುತ್ತದೆ.

(1) ನಿರ್ದಿಷ್ಟತೆ ಅಥವಾ ಶುದ್ಧತೆ (Accuracy)

(2) ನಿರರ್ಗಳತೆ (Fluency)

(3) ಸಂಖ್ಯಾತ್ಮಕತೆ (Numeracy)

(4) ಸಾಕ್ಷರತೆ (Literacy)

**134.** ಬರವಣಿಗೆಯ ಸಂಪ್ರದಾಯದಲ್ಲಿ ಇವು ಒಳಗೊಳ್ಳುತ್ತವೆ

(1) ಕಥೆಯ ಕಲ್ಪನೆಗಳು ಅಥವಾ ವಿಚಾರಗಳು (Story Ideas)

(2) ಕಲ್ಪನೆ (Imagination)

(3) ಸರಿಯಾದ ಚಿಹ್ನೆಗಳ ಪ್ರಯೋಗ

(4) ಒಳ್ಳೆಯ ಶಬ್ದಾವಳಿ (ಶಬ್ದಕೋಶ) (Vocabulory)

**135.** ಭಾಷೆಯಲ್ಲಿ ಮೌಲ್ಯಮಾಪನದ ಮುಖ್ಯ ಉದ್ದೇಶವು ಇದು ಆಗಿರಬೇಕು

(1) ಕಲಿಯುವವರ ತಪ್ಪುಗಳನ್ನು ಕಂಡುಹಿಡಿಯುವುದು

(2) ವಿದ್ಯಾರ್ಥಿಗಳ ಪದೋನ್ನತಿಗಾಗಿ (Promotion) ಅವರ ಸಾಧನೆಯನ್ನು ಪರಿಗಣಿಸುವುದು

(3) ವಿದ್ಯಾರ್ಥಿಗಳ ಸಾಧನೆಯನ್ನು ಅಳೆಯುವುದಕ್ಕಾಗಿ

(4) ಕಲಿಯುವಿಕೆಯಲ್ಲಿ ಇರುವ ಅಡ್ಡಿಗಳನ್ನು ಗುರುತಿಸುವುದು ಮತ್ತು ಪರಿಹಾರವನ್ನು ಹುಡುಕುವುದು

**ನಿರ್ದೇಶನ : ಕೆಳಗಿನ ಗದ್ಯವನ್ನು ಓದಿ ಅನುಸರಿಸಿ ಬರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 136–143) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ:**

ತುಂಟ ಪುಟಾಣಿ ಹುಡುಗ ದಿನವೂ ನೋಡುತ್ತಿದ್ದ, ಅವನ ಆಟದ ಕೋಣೆಯ ಬಾಗಿಲು ತೆರೆದ ಕೂಡಲೇ ಎರಡು ಗುಬ್ಬಚ್ಚಿಗಳು ಕಿಚಕಿಚ ಮಾತನಾಡಿಕೊಳ್ಳುತ್ತ ಹಾರಿ ಬಂದು ಕೋಣೆಯ ಛಾವಣಿಯ ಟೀರುಗಳ ನಡುವೆ ಹುಲ್ಲು ಕಡ್ಡಿಗಳನ್ನು ಇಡುತ್ತಿದ್ದವು. ಒಂದು ದಿನ ''ಏನು ಮಾಡ್ತಿದೀರಿ?'' ಎಂದು ಕುತೂಹಲ ತಾಳಲಾರದೆ ಕೇಳಿದ. ''ಮನೆ ಕಟ್ಟಿಕೊಳ್ತಿದ್ದೇವೆ'' ಎಂದು ಹೆಣ್ಣು ಗುಬ್ಬಚ್ಚಿ ಹೇಳಿತು. ಕೂಡಲೇ ಗಂಡು ಹಕ್ಕಿ ಅವಳನ್ನು ತಿದ್ದಿತು. ''ಮನೆಯಲ್ಲಪ್ಪ ಗೂಡು''. ಗಂಡುಹಕ್ಕಿಯ ಆತಂಕ ಏನೆಂದರೆ ಈ ಹುಡುಗನಿಗೆ ಮನೆಯೊಳಗೆ ಇನ್ನೊಂದು ಮನೆ ಕಟ್ಟಿಕೊಳ್ಳುತ್ತಿದ್ದೇವೆ ಅಂದರೆ ಆತ ಹೆತ್ತವರಿಗೆ ಚಾಡಿ ಹೇಳಿ ತಮ್ಮನ್ನು ಅಲ್ಲಿಂದ ಓಡಿಸಬಹುದು ಎನ್ನುವುದು. ಅದನ್ನು ಗಂಡುಹಕ್ಕಿ ಹೆಂಡತಿಗೆ ಪಿಸುಮಾತಿನಲ್ಲಿ ವಿವರಿಸಿತು. ಅವನ ಪಿಸುಮಾತನ್ನು ಕೂಡ ಕೇಳಿಸಿಕೊಂಡ ಹುಡುಗ ನಕ್ಕು ''ನಿಮ್ಮನ್ನು ಓಡಿಸುವಷ್ಟು ಕೆಟ್ಟವನಲ್ಲ ನಾನು. ಒಂದಿಲ್ಲದಿದ್ದರೆ ಎರಡು ಗೂಡು ಕಟ್ಟಿಕೊಳ್ಳಿ. ಆದರೆ ನಿಮ್ಮನ್ನು ಒಂದು ಪ್ರಶ್ನೆ ಕೇಳ್ತೀನಿ. ಬೇಸರ ಪಡಬೇಡಿ'' ಅಂದ. ''ಕೇಳು'' ಎಂದು ಎರಡೂ ಗುಬ್ಬಚ್ಚಿಗಳು ಹೇಳಿದವು. ಅವರಿಗೆ ಅವನು ತುಂಬ ಒಳ್ಳೆಯವನು ಎಂಬುದು ಗೊತ್ತಾಗಿತ್ತು. ''ನನ್ನ ಕೋಣೇಲೇ ಇರಬಹುದಲ್ಲ, ನಿಮಗಾಗಿ ಬೇರೆ ಮನೆ ಯಾಕೆ ಬೇಕು? ನನ್ನೊಂದಿಗೆ ಆಟ ಆಡಿಕೊಂಡು ಇರಬಹುದು'' ಅಂದ.

ಗುಬ್ಬಚ್ಚಿಗಳಿಗೆ ಈ ಪ್ರಶ್ನೆ ತುಂಬ ಕಷ್ಟದ್ದಾಗಿ ಕಂಡಿತು. ಹೆಣ್ಣು ಗುಬ್ಬಚ್ಚಿ ''ನಮಗೊಬ್ಬ ಪಾಪ ಬರ್ತಾನೆ. ಅವನಿಗೆ ನಮ್ಮ ಮನೆಯೇ ಇಷ್ಟ'' ಎಂದಿತು. ಹುಡುಗನಿಗೆ ಬೇಸರವಾಯಿತು. ಅವರನ್ನು ಬೈಯಲಿಲ್ಲ, ಅಲ್ಲಿಂದ ಓಡಿಸಲಿಲ್ಲ. ಅವು ಕಟ್ಟುತ್ತಿದ್ದ ಗೂಡನ್ನು ತಾತ್ಸಾರದಿಂದ ಗಮನಿಸುತ್ತಿದ್ದ. ಗೂಡು ಸಿದ್ಧವಾಯಿತು. ಒಂದು ದಿನ ತಾಯಿ ಮೊಟ್ಟೆ ಇಟ್ಟಿತು. ಹಕ್ಕಿಯ ಪಾಪು ಓಡಾಡುವುದಿಲ್ಲ. ಗೋಲಿಯಂತೆ ಸುಮ್ಮನೆ ಬಿದ್ದಿವೆ. ಬೇಸರದಿಂದ ಮೊಟ್ಟೆಗಳಿಗೆ ತನ್ನಲ್ಲಿರುವ ಆಟದ ಸಾಮಾನು, ಗೊಂಬೆಗಳ ಬಗ್ಗೆ ಹೇಳಿದ. ಈ ಮೊಟ್ಟೆಗಳು ಸುಮ್ಮನಿದ್ದವು. ಕೆಲವೇ ದಿನಗಳಲ್ಲಿ ಹುಡುಗ ನೋಡಿದರೆ ಅಲ್ಲಿ ಹಕ್ಕಿಗಳೂ

ಇರಲಿಲ್ಲ, ಮೊಟ್ಟೆಯೂ ಇರಲಿಲ್ಲ. ಗೂಡು ಮಾತ್ರ ಇತ್ತು. ಹಕ್ಕಿಗಳು ಮತ್ತೆ ಬರಬಹುದು ಎಂದು ಕಾದ. ಅವು ಬರಲೇ ಇಲ್ಲ. ಹುಲ್ಲುಕಡ್ಡಿಗಳನ್ನು ತೆಗೆದು ಅದರಂತೆ ಕಟ್ಟಲು ನೋಡಿದ, ಆಗಲಿಲ್ಲ.

ಆತ ಬೆಳೆದಂತೆಲ್ಲ ಈ ನಿರಾಶೆ ಪ್ರಾಣಿ ಪಕ್ಷಿಗಳ ಬಗ್ಗೆ ಮೆಚ್ಚಿಗೆಯನ್ನೇ ಉಂಟುಮಾಡಿತು. ಗುಬ್ಬಚ್ಚಿಗಳು ಹಾರಾಡುವುದನ್ನು, ಕಿಚಕಿಚ ಮಾತಾಡಿಕೊಂಡು ಖುಶಿಯಾಗಿ ಇರುವುದನ್ನು ಕಂಡಾಗಲೆಲ್ಲ ಅವುಗಳ ನೆಲೆಯಿಲ್ಲದ ಬದುಕು, ಬಡತನ, ಸ್ವಾತಂತ್ರ್ಯ ಇವೆಲ್ಲವುಗಳ ಜೊತೆಗೆ ಅವುಗಳ ಸ್ವಾಭಿಮಾನ ಅವನನ್ನು ಅಚ್ಚರಿಗೊಳಿಸುತ್ತಿತ್ತು.

**136.** ಈ ಕಥೆಯ ಸ್ವರೂಪವು

(1) ಸತ್ಯವಾದದ್ದು

(2) ಸಾಂಕೇತಿಕವಾದದ್ದು

(3) ಉಪದೇಶಾತ್ಮಕವಾದದ್ದು

(4) ನೀತಿಬೋಧನಾತ್ಮಕವಾದದ್ದು

**137.** ಗುಬ್ಬಿಗಳು ಕಟ್ಟಿಕೊಳ್ಳುತ್ತಿದ್ದುದು ಏನನ್ನು?

(1) ಗೂಡನ್ನು

(2) ಮನೆಯನ್ನು

(3) ಹುಲ್ಲುಕಡ್ಡಿಯನ್ನು

(4) ಗೂಡುಗಳನ್ನು

**138.** ಮನೆಯೊಳಗೆ ಮನೆ ಮಾಡಿದರೆ - ಹುಡುಗ ಏನು ಮಾಡುತ್ತಾನೆ ಎಂದು ಗುಬ್ಬಚ್ಚಿ ಭಾವಿಸಿತು?

(1) ಓಡಿಸುತ್ತಾನೆ

(2) ಒಡೆದು ಹಾಕುತ್ತಾನೆ

(3) ಅಪ್ಪ-ಅಮ್ಮನಿಗೆ ಹೇಳಿ ಓಡಿಸುತ್ತಾನೆ

(4) ಸಂತೋಷಪಡುತ್ತಾನೆ

**139.** ಇದು ಕತೆಯ ನೀತಿ ಎಂದು ಹೇಳಬಹುದು

(1) ಗುಬ್ಬಿಗಳ ಹಾಗೆ ಕೈಕೊಟ್ಟು ಓಡಿಹೋಗುವುದು ತಪ್ಪು

(2) ಪ್ರಾಪಂಚಿಕ, ಲೌಕಿಕ ಸಂಪತ್ತು ಮುಖ್ಯ.

(3) ವೈಭವ, ಅಂತಸ್ತುಗಳು ಬದುಕುವ ಸ್ವಾತಂತ್ರ್ಯವನ್ನು ಕಟ್ಟಿಹಾಕುತ್ತವೆ.

(4) ಪ್ರಾಣಿ, ಪಕ್ಷಿಗಳ ಜೊತೆಗೆ ಪ್ರೀತಿಯಿಂದ ಇರಬೇಕು.

**140.** ಮೊಟ್ಟೆಗಳು ಗೂಡಿನಲ್ಲಿ ಇರದಿರಲು ಕಾರಣ

(1) ಗುಬ್ಬಿಗಳು ಅವುಗಳನ್ನು ಬೇರೆಕಡೆಗೆ ಸಾಗಿಸಿದ್ದವು

(2) ಹುಡುಗನ ತಂದೆ-ತಾಯಿ ಅವುಗಳನ್ನು ಎತ್ತಿ ಹಾಕಿದ್ದರು

(3) ಮೊಟ್ಟೆಗಳು ಒಡೆದು ಹಾಳಾಗಿದ್ದವು

(4) ಮೊಟ್ಟೆಗಳು ಮರಿಗಳಾಗಿ ಹಾರಿಹೋಗಿದ್ದವು

**141.** ಹುಡುಗನು ಗುಬ್ಬಚ್ಚಿಗಳ ಜೀವನವನ್ನು ನೋಡುತ್ತಿದ್ದ ದೃಷ್ಟಿ

(1) ತನ್ನ ಮುಗ್ಧವಾದ ಆಸಕ್ತಿಯಿಂದ

(2) ತನ್ನ ಅಂತಸ್ತು ಹಾಗೂ ವೈಭವದ ಕಣ್ಣಿನಿಂದ

(3) ಮನುಷ್ಯ ಸಹಜ ಕನಿಕರದ ಭಾವದಿಂದ

(4) ಗುಬ್ಬಿಗಳಿಗೆ ಸಹಾಯ ಮಾಡಲೇಬೇಕು ಎನ್ನುವ ದೃಷ್ಟಿಯಿಂದ

**142.** 'ಕಿಚಕಿಚ' ಪದವು ಒಂದು _________

(1) ಅನುಕರಣ ಪದ

(2) ಅನುರಣನ ಪದ

(3) ಕೂಗುವ ಪದ

(4) ಅನುಸರಣ ಪದ

**143.** 'ತಾತ್ಸಾರ' ಪದದ ಅರ್ಥ

(1) ಬೇಸರ

(2) ನೋವು

(3) ಸಿಟ್ಟು

(4) ಅಸಡ್ಡೆ

ನಿರ್ದೇಶನ : ಕೆಳಗಿನ ಗದ್ಯವನ್ನು ಓದಿ ಅನುಸರಿಸಿ ಬರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **144–150**) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :

ಬೆಂಚಿನ ಮೇಲೆ ಒರಗಿಕೊಂಡಿದ್ದ ಹಾಗೆ ಮೆಲ್ಲನೆ ತಲೆ ಎತ್ತಿದೆ. ಡಬ್ಬಿಯ ಕಿಟಕಿಯೊಳಗಿನಿಂದ ತೂರಿ ನನ್ನ ದೃಷ್ಟಿ ಹೊರಗಣ ಸೃಷ್ಟಿಯ ಮೇಲೆಲ್ಲ ಹಾರಿ ಬಂತು. ಮೂಡಣದಲ್ಲಿ ಆಗತಾನೆ ಮನದೋರುತ್ತಿದ್ದಳು ಉಷಾರಾಣಿ. ಇನ್ನು ಪೂರ್ತಿಯಾಗಿ ಕರಗಿರಲಿಲ್ಲ ಕತ್ತಲೆ. ಆ ವಿಚಿತ್ರ ಮಬ್ಬಿನಲ್ಲಿ ಅನತಿ ದೂರದಲ್ಲಿ ಮುಗಿಲು ಮುತ್ತಿ ಸುತ್ತ ನಿಂತ ಆ ಬೆಟ್ಟಗಳ ಸಾಲು! ಅದೊಂದು ಕನಸಿನ ನೋಟವೇ ಎಂದೆನಿಸುತ್ತಿತ್ತು. ಅವುಗಳ ಮೇಲೆ ಸುರಿದಿದ್ದ ಆ ಬೆಳ್ಳನೆಯ ಮಂಜು ಅದೆಷ್ಟು ಮೋಹಕವಾಗಿತ್ತು – ರೇಶ್ಮೆಯ ಶಾಲಿನ ಹಾಗೆ. ಆದರೆ –

ಮಂಗಲ ಪ್ರಭಾತದ ಈ ವಿಲಕ್ಷಣ ಸೃಷ್ಟಿಸೌಂದರ್ಯ ನನ್ನ ಹೃದಯವನ್ನು ಸೂರೆಗೊಳ್ಳಲು ಸಮರ್ಥವಾಗಲಿಲ್ಲ. ಎದೆಯಲ್ಲಿ ಸುಳಿಯುತ್ತಿದ್ದ ಭಾವನೆಯ ಅಲೆಗಳ ಮೇಲೆ ನಾನು ತೇಲಿ ಹೋಗುತ್ತಿದ್ದೆ – ಮೆಲ್ಲ, ಮೆಲ್ಲನೆ ನನಗೆ ತಿಳಿಯದ ಹಾಗೆ.

ಭೀಕರ ಸದ್ದು ಮಾಡುತ್ತ ಓಡುತ್ತಿತ್ತು ರೈಲು. ಅದರೊಂದಿಗೆ ನನ್ನ ಹೃದಯವೂ ತಾಳ ಹಾಕುತ್ತಿತ್ತು. 'ಬಂತು! ಬಂತು! ಊರು ಬಂತು! ಇನ್ನೇನು ಒಂದೆರಡು ಸ್ಟೇಷನ್ ಕಳೆದರೆ ಆಯಿತು' ಎಂದು ರಾಗ ಹೇಳುತ್ತಿತ್ತು.

ಹಾಗೆಯೇ ತಿಳಿಯುವಂತಿಲ್ಲ ಆಗಿನ ನನ್ನ ಭಾವಲಹರಿ. ಆರು ತಿಂಗಳಿನ ಕಾಲ ಸೆರೆಮನೆಯಲ್ಲಿದ್ದು ಬಂದವರಿಗೆ ಮಾತ್ರ ಅದು ತಿಳಿದೀತೇನೋ! ಬಾಹ್ಯ ಜಗತ್ತಿನೊಂದಿಗೆ ಕೊಂಚವೂ ಸಂಪರ್ಕವಿಲ್ಲದೆ – ಕಾರಾಗಾರದ ಉನ್ನತ ಗೋಡೆಗಳ ಮಧ್ಯೆ ಒಂದು ನೂರಾ ಎಂಬತ್ತಾರು ದಿನಗಳನ್ನು ಕಳೆಯುವುದು! ತಾಯಿ, ತಮ್ಮ, ಅಕ್ಕ, ತಂಗಿ ಯಾರ ಮುಖವನ್ನೂ ನೋಡುವಂತಿಲ್ಲ.

ಏಕೋ ಏನೋ ಹಠಾತ್ತಾಗಿ ರೈಲು ನಿಂತುಬಿಟ್ಟಿತು. ಏನಾಯಿತೋ ಏನು ಅನಾಹುತವೋ ಎಂದು ಕಿಟಕಿಯಿಂದ ಕತ್ತು ಚಾಚಿದೆ.

ದೂರದಲ್ಲಿನ ಚಿಕ್ಕ ಕಾಲುದಾರಿಯಲ್ಲಿ ಆರೇಳು ಜನ ಸಾಲಾಗಿ ನಡೆದಿದ್ದರು. ಎಲ್ಲರಿಗೂ ಮುಂದೆ ಒಂದು ಮುದಿ ಎತ್ತು. ಅದರ ಮೇಲೆ ಯಾವುವೋ ಸಾಮಗ್ರಿಗಳು. ಮಧ್ಯಮ ವಯಸ್ಸಿನ ಹೆಂಗಸೊಬ್ಬಳು, ಅವಳ ತಲೆಯ ಮೇಲೆ ಗಡಿಗೆ, ಮಡಕೆಗಳು. ಐದು ಪುಟ್ಟ ಮಕ್ಕಳು. ಅವರ ತಲೆಯ ಮೇಲೂ ಚಿಕ್ಕ ಮೂಟೆಗಳು.

ಎಂಜಿನ್ನಿನ ಹತ್ತಿರ ತೆಳ್ಳನೆಯ ಮನುಷ್ಯ ತಲೆ ತಗ್ಗಿಸಿ ನಿಂತಿದ್ದ. ಹಿಂದೂಸ್ತಾನಿಯಲ್ಲಿ ಬೈಗಳ ಮಳೆ ಸುರಿಸುತ್ತ ಡ್ರೈವರು ಅವನಿಗೆ ಏಟು ಬಿಗಿಯುತ್ತಿದ್ದ. ಗಾರ್ಡು ಬಂದು ಆ ಮನುಷ್ಯನನ್ನು ತಿರಸ್ಕಾರದಿಂದ ಬೂಟುಗಾಲಿನಿಂದ ಒದ್ದುಬಿಟ್ಟ, ಅದರ ರಭಸಕ್ಕೆ ಆ ಪ್ರಾಣಿ ಉರುಳುತ್ತ ಹೋಗಿ ಮಾರು ದೂರದಲ್ಲಿ ಬಿದ್ದುಕೊಂಡ.

ರೈಲು ಮತ್ತೆ ಓಡತೊಡಗಿತು.

ಕಿಟಕಿಯಲ್ಲಿ ತಲೆಯನ್ನಿರಿಸಿ ಆ ಜನರನ್ನೇ ನಾನು ನೋಡುತ್ತಿದ್ದೆ. ದಾರಿದ್ರ್ಯದಿಂದ ಕುಸಿದು ಹೋಗಿರುವ ಬಡ ಭಾರತವೇ ಆ ಸಂಸಾರದ ರೂಪು ತಳೆದು ಬಂದ ಹಾಗೆ ಕಾಣಿಸಿತು. ನನಗೆ ನನ್ನ ಕಿವಿಗಳಲ್ಲಿ ಯಾರೋ ಕೂಗಿಕೊಂಡ ಹಾಗೆ ಭಾಸವಾಯಿತು. 'ನಾನು ಹಿಂದೂಸ್ತಾನ ! ನಾನು ಹಿಂದೂಸ್ತಾನ !''

**144.** ಹೊರಗಣ ಸೃಷ್ಟಿಯು 'ಕನಸಿನ ನೋಟ' ಎಂದು ಅನ್ನಿಸಲು ಕಾರಣ

(1) ಕತ್ತಲೆ ಬೆಳಕಿನ ನಡುವಣ ಮಂದ ಬೆಳಕು

(2) ನಿದ್ದೆಯಿಂದ ಇನ್ನೂ ಸಂಪೂರ್ಣವಾಗಿ ಎದ್ದಿರದೇ ಇರುವುದು

(3) ಕನಸಿನಲ್ಲಿ ಪ್ರಕೃತಿಯನ್ನು ಕಂಡಿದ್ದು

(4) ಮನಸ್ಸು ಎಲ್ಲಿಯೋ ಹರಿದುಹೋಗಿದ್ದು

**145.** ಕಥೆಯನ್ನು ಯಾರ ದೃಷ್ಟಿಕೋನದಿಂದ ನೋಡಲಾಗಿದೆ?

(1) ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯ ದೃಷ್ಟಿಯಿಂದ

(2) ಭಾರತೀಯತೆಯ ದೃಷ್ಟಿಕೋನ

(3) ಕಾಲುದಾರಿಯ ಸಂಸಾರ ಮಾಡುವ ಕುಟುಂಬದ ದೃಷ್ಟಿಯಿಂದ

(4) ನಿರೂಪಕನ ದೃಷ್ಟಿಯಿಂದ

**146.** ಊರು ಹತ್ತಿರ ಬಂದಾಗ ಉಂಟಾದ ಭಾವನೆಗಳು

(1) ತೀವ್ರವಾದ ನೋವು, ನಲಿವು

(2) ತೀವ್ರವಾದ ಆಕಾಂಕ್ಷೆ, ಕಾತುರ

(3) ತೀವ್ರವಾದ ನಿರಾಶೆ ಮತ್ತು ಆಶೆ

(4) ತೀವ್ರವಾದ ಪ್ರೀತಿ, ದುಃಖ

**147.** ಕಥೆಯಲ್ಲಿ ರೈಲು ಮತ್ತು ಕಾಲುದಾರಿಯ ಸಂಸಾರ – ಸೂಚಿಸುವ ಸಂಕೇತ

(1) ಯಾಂತ್ರಿಕತೆ – ಮನುಷ್ಯತ್ವ

(2) ಶ್ರೀಮಂತಿಕೆ – ನಿರಹಂಕಾರತ್ವ

(3) ಅಭಿವೃದ್ಧಿ – ಬಡತನ

(4) ವೇಗ – ಕಾಲ್ನಡಿಗೆ

**148.** ರೈಲು ನಿಂತುಬಿಟ್ಟದ್ದಕ್ಕೆ ಕಾರಣ

(1) ಕಾಲುದಾರಿಯ ಸಂಸಾರದ ಹಿರಿಯ ವ್ಯಕ್ತಿಯು ಅಡ್ಡ ಬಂದಿದ್ದು

(2) ರೈಲಿನ ಡ್ರೈವರ್‌ನಿಗೆ ನಡೆದು ಹೋಗುತ್ತಿದ್ದ ಮನುಷ್ಯನನ್ನು ಹೊಡೆಯಬೇಕು ಅನ್ನಿಸಿದ್ದು

(3) ರೈಲಿನ ಇಂಜಿನ್ನು ಕೆಟ್ಟುಹೋಗಿದ್ದು

(4) ತೆಳ್ಳನೆಯ ವ್ಯಕ್ತಿ ರೈಲಿನ ಚೈನು ಎಳೆದಿದ್ದು

**149.** 'ಮೂಡಣ' ಪದದ ವಿರುದ್ಧ ಪದ

(1) ಬಡಗಣ

(2) ಪಡುವಣ

(3) ತೆಂಕಣ

(4) ಬಿನ್ನಣ

**150.** 'ಸೂರೆಗೊಳ್ಳು' ಪದದ ಅರ್ಥ

(1) ನುಂಗಿಹಾಕು

(2) ದಾಳಿಮಾಡು

(3) ಆಕರ್ಷಿಸು

(4) ನುಗ್ಗು

*ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :*

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ. ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ ಪುಟ-2ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್‌ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತುಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆ ಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರ ಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಗೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯ ಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಎಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್‌ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ಅನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಕೇಂದ್ರ ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರಿ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.
12. ಎಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ-ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. ಪರೀಕ್ಷೆ ಮುಗಿದ ನಂತರ ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.

## निम्नलिखित निर्देशों को ध्यान से पढ़ें :

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर-पत्र के **पृष्ठ-2** पर केवल एक वृत्त को ही पूरी तरह **काले/नीले बॉलपॉइंट पेन** से भरें। एक बार उत्तर अंकित करने के बाद उसे बदला नहीं जा सकता है।
3. परीक्षार्थी सुनिश्चित करें कि इस उत्तर-पत्र को मोड़ा न जाए एवं उस पर कोई अन्य निशान न लगाएँ। परीक्षार्थी अपना अनुक्रमांक उत्तर-पत्र में निर्धारित स्थान के अतिरिक्त अन्यत्र न लिखें।
4. परीक्षा पुस्तिका एवं उत्तर-पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर-पत्र के संकेत या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी।
5. परीक्षा पुस्तिका/उत्तर-पत्र में दिए गए परीक्षा पुस्तिका संकेत व संख्या को परीक्षार्थी सही तरीके से हाजिरी-पत्र में लिखें।
6. OMR उत्तर-पत्र में कोडित जानकारी को एक मशीन पढ़ेगी। इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है।
8. मोबाइल फोन, बेतार संचार युक्तियाँ (स्विच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए। इस सूचना का पालन न होने पर इसे परीक्षा में अनुचित साधनों का प्रयोग माना जाएगा और उनके विरुद्ध कार्यवाही की जाएगी, परीक्षा रद्द करने सहित।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें।
11. कार्यरत निरीक्षक को अपना उत्तर-पत्र दिए बिना एवं हाजिरी-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे। यदि किसी परीक्षार्थी ने दूसरी बार हाजिरी-पत्र पर हस्ताक्षर नहीं किए, तो यह माना जाएगा कि उसने उत्तर-पत्र नहीं लौटाया है और यह अनुचित साधन का मामला माना जाएगा। **परीक्षार्थी अपने बाएँ हाथ के अँगूठे का निशान हाजिरी-पत्र में दिए गए स्थान पर अवश्य लगाएँ।**
12. इलेक्ट्रॉनिक/हस्तचालित परिकलक का उपयोग वर्जित है।
13. परीक्षा हॉल/कक्ष में आचरण के लिए परीक्षार्थी बोर्ड के सभी नियमों एवं विनियमों द्वारा नियमित हैं। अनुचित साधनों के सभी मामलों का फैसला बोर्ड के नियमों एवं विनियमों के अनुसार होगा।
14. किसी हालत में परीक्षा पुस्तिका और उत्तर-पत्र का कोई भाग अलग न करें।
15. **परीक्षा सम्पन्न होने पर, परीक्षार्थी हॉल/कक्ष छोड़ने से पूर्व उत्तर-पत्र निरीक्षक को अवश्य सौंप दें।** ***परीक्षार्थी अपने साथ इस परीक्षा पुस्तिका को ले जा सकते हैं।***

## READ THE FOLLOWING INSTRUCTIONS CAREFULLY :

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Black/Blue Ballpoint Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
4. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet/Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the Examination Hall/Room.
8. Mobile phones, wireless communication devices (even in switched off mode) and the other banned items should not be brought in the Examination Halls/Rooms. Failing to comply with this instruction, it will be considered as using unfair means in the examination and action will be taken against them including cancellation of examination.
9. Each candidate must show on demand his/her Admit Card to the Invigilator.
10. No candidate, without special permission of the Centre Superintendent or Invigilator, should leave his/her seat.
11. The candidates should not leave the Examination Hall/Room without handing over their Answer Sheet to the Invigilator on duty and sign the Attendance Sheet twice. Cases where a candidate has not signed the Attendance Sheet second time will be deemed not to have handed over the Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic/Manual Calculator is prohibited.
13. The candidates are governed by all Rules and Regulations of the Board with regard to their conduct in the Examination Hall/Room. All cases of unfair means will be dealt with as per Rules and Regulations of the Board.
14. No part of the Test Booklet and Answer Sheet shall be detached under any circumstances.
15. **On completion of the test, the candidate must hand over the Answer Sheet to the Invigilator in the Hall/Room.** ***The candidates are allowed to take away this Test Booklet with them.***